<u>ಸಾಕ್ಷಿಯನ್ನು ದಿಃ**19.08.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಜಿ.ಆರ್. ವಕೀಲರಿಂದ:</u>

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸರ್ವೇ ನಂ.14/20 ರಲ್ಲಿ 1 ಎಕರೆ 7 ಗುಂಟೆ ಇದೆ. ಸದರಿ ಆಸ್ತಿಯಲ್ಲಿ ನಾವು ಹಾಗೂ ನಮ್ಮ ಸಹೋದರರು ಮನೆ ಕಟ್ಟಿ ಸ್ವಾಧೀನಾನುಭವದಲ್ಲಿದ್ದೇವೆ. ಸದರಿ ಆಸ್ತಿಯಲ್ಲಿ ನಮ್ಮ ಕುಟುಂಬವನ್ನು ಹೊರತು ಪಡಿಸಿ ಬೇರೆ ಯಾರು ಸ್ವಾಧೀನಾನುಭವದಲ್ಲಿರುವುದಿಲ್ಲ. ಸದರಿ ಆಸ್ತಿಯ ಖಾತೆ, ಪಹಣಿ ನಮ್ಮ ಹೆಸರಿನಲ್ಲೇ ಇರುತ್ತದೆ. ಸದರಿ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ನಮ್ಮ ತಂದೆಗೆ 6 ಜನ ಸಹೋದರರಿದ್ದರು. ನಮ್ಮ ತಂದೆ ಹಾಗೂ ಅವರ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಆಸ್ತಿಗೆ ಸರ್ವೇ ನಂ.14/15 ಎಂದು ಹಳೆ ಸರ್ವೇ ನಂಬರ್ ಇತ್ತು. ಸರ್ವೇ ನಂ.14/20 ರಲ್ಲಿ 1 ಎಕರೆ 7 ಗುಂಟೆ ಆಸ್ತಿ ಪೂರ್ತಿ ನನ್ನ ತಂದೆಯ ಭಾಗಕ್ಕೆ ಬಂದಿತ್ತು. ಸದರಿ 1 ಎಕರೆ 7 ಗುಂಟೆಯಲ್ಲಿ 18 ಗುಂಟೆ ನನ್ನ ಭಾಗಕ್ಕೆ ಬಂದಿರುತ್ತದೆ. ನನಗಿಂತ ಇಬ್ಬರೂ ಹಿರಿಯ ಸಹೋದರರು ಇರುತ್ತಾರೆ.

ನಮ್ಮ ಅಣ್ಣ-ತಮ್ಮಂದಿರು ಯಾರು ವಿಭಾಗ ಮಾಡಿಕೊಳ್ಳದೇ 1 ಎಕರೆ 7 ಗುಂಟೆಯಲ್ಲಿ ಸಂಪೂರ್ಣ ಸ್ವಾಧೀನಾ ನುಭವದಲ್ಲಿದ್ದೇವೆ. ಸದರಿ 1 ಎಕರೆ 7 ಗುಂಟೆಯ ಚೆಕ್ಕು ಬಂದಿ ಪೂರ್ವಕ್ಕೆಃರಸ್ತೆ , ಪಶ್ಚಿಮಕ್ಕೆಃನಮ್ಮ ಆಸ್ತಿಯಾದ ಸರ್ವೇ ನಂ.14/20, ಉತ್ತರಕ್ಕೆಃ ನಮ್ಮದೇ ಆಸ್ತಿಯಾದ ಸರ್ವೇ ನಂ.14/20 ಮತ್ತು ದಕ್ಷಿಣಕ್ಕೆಃರಸ್ತೆ. ಸರ್ವೇ ನಂ.14/20 ರ

1 ಎಕರೆ 7 ಗುಂಟೆಯಲ್ಲಿ 2 ಗುಂಟೆಯನ್ನು ವಾದಿಗೆ ಮಾರಾಟ ಮಾಡಿರುತ್ತೇನೆ. ಸದರಿ ಕ್ರಯ ಪತ್ರಕ್ಕೆ ನನ್ನ ಸಹೋದರರು ಸಹಿ ಮಾಡಿರುತ್ತಾರೆ.

ನಾನು ವಾದಿಗೆ ಮಾರಾಟ ಮಾಡಿದ ಚೆಕ್ಕು ಬಂದಿ ಪೂರ್ವಕ್ಕೆ:ರಸ್ತೆ, ಪಶ್ಚಿಮಕ್ಕೆ:ನಮ್ಮದೇ ಜಮೀನು, ಉತ್ತರಕ್ಕೆ:ನಮ್ಮದೇ ಜಮೀನು ಮತ್ತು ದಕ್ಷಿಣಕ್ಕೆ:ರಸ್ತೆ. ಈ ಮೇಲೆ ಹೇಳಿದ ಚೆಕ್ಕು ಬಂದಿಯನ್ನೇ ವಾದಿಯ ಕ್ರಯ ಪತ್ರದಲ್ಲಿ ನಮೂದು ಮಾಡಲಾಗಿದೆ. ಪ್ರತಿವಾದಿಯವರನ್ನು ನಾನು ನೋಡಿರುತ್ತೇನೆ. ಪ್ರತಿವಾದಿಗಳು ನಮ್ಮ ಊರಿನವರಲ್ಲ. ದಾವಾ ಆಸ್ತಿಯ ಜಮೀನಿನ ಯಾವ ದಿಕ್ಕಿಗೂ ಪ್ರತಿವಾದಿಗಳ ಆಸ್ತಿ ಬರುವುದಿಲ್ಲ. ಪ್ರತಿವಾದಿಗಳ ಖಾಲಿ ನಿವೇಶನವನ್ನು ನೋಡಿರುತ್ತೇನೆ. ಸಾಕ್ಷಿಯು ಮುಂದುವರೆದು ಬೇರೆ ಸರ್ವೇ ನಂಬರ್ ನಲ್ಲಿರುತ್ತವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಪ್ರತಿವಾದ ಪತ್ರದ ಆಸ್ತಿ ಸರ್ವೇ ನಂ.14/15 ರಲ್ಲಿ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿ ಯಾವ ಸರ್ವೇ ನಂಬರ್ ನಲ್ಲಿದೆ ಎಂದು ನನಗೆ ಗೊತ್ತಿಲ್ಲ. ವಾದಿಯರು ಪೆಟ್ಟಿಗೆ ಅಂಗಡಿ ಇಡಲು ಪ್ರತಿವಾದಿಗಳು ತಕರಾರು ಮಾಡಿದ್ದರು ಎಂದು ಈ ದಾವೆ ಹೂಡಿರುತ್ತಾರೆ. ವಾದಿ ಸರ್ವೇ ನಂ.14/20 ರ ಜಮೀನಿನಲ್ಲಿ ಪೆಟ್ಟಿಗೆ ಅಂಗಡಿ ಇಡಲು ಹೋಗಿದ್ದರು. ಸದರಿ ಆಸ್ತಿಯಲ್ಲಿ ಪ್ರತಿವಾದಿಗಳು ಎಂದಿಗೂ ಸ್ವಾಧೀನಾನುಭವದಲ್ಲಿರಲಿಲ್ಲ. ದಾವಾ ಆಸ್ತಿಯಲ್ಲಿ ಈಗ ಏನಾದರೂ ಬದಲಾವಣೆ ಆಗಿದೆಯೇ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಈಗ ವಾದಿಯ ಸ್ವಾಧೀನಾನುಭವದಲ್ಲಿರುತ್ತದೆ. ದಾವಾ ಆಸ್ತಿಯಲ್ಲಿ ವಾದಿ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ

ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.